(ಇಂದು ದಿನಾಂಕ 12-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ**

ನಾನು ಹಾಜರುಪಡಿಸಿದಂತಹ ಸಾಲದ ಅರ್ಜಿಯ ಅರ್ಜಿಯನ್ನು ಶಾಖಾ ಸಿಬ್ಬಂದಿಯವರು ಭರ್ತಿ ಮಾಡಿದ್ದಾರೆ. ಅದೇ ರೀತಿ ನಿ.ಪಿ.6 ರಿಂದ ನಿ.ಪಿ. 12 ದಾಖಲಾತಿಗಳಲ್ಲಿರುವ ಬರವಣಿಗೆ ನಮ್ಮ ಶಾಖಾ ಸಿಬ್ಬಂದಿಯವರದ್ದು. ಸದರಿ ಬರವಣಿಗೆ ಇರುವ ಶಾಖಾ ಸಿಬ್ಬಂದಿಯ ಹೆಸರು ಹೇಳಲು ಬರುವುದಿಲ್ಲ. ನಿ.ಪಿ. 4 ರಿಂದ ನಿ.ಪಿ.11 ದಾಖಲಾತಿಗಳು ಆದಾಗ ನಾನು ಬೇರೆ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಆರೋಪಿ ಎಲ್ಲಿ ಸಹಿ ಹಾಕಿದ್ದಾನೆ ಎಂದು ನನಗೆ ಹೇಳಲು ಬರುವುದಿಲ್ಲ. ನಿ.ಪಿ. 4 ರಿಂದ ನಿ.ಪಿ.12 ರವರೆಗಿನ ದಾಖಲಾತಿಗಳ ಮೇಲೆ ಇರುವ ಸಹಿ ಆರೋಪಿಯದೇ ಎಂದು ಹೇಳಲು ಬೇರೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಉಳಿತಾಯ ಖಾತೆ ಮತ್ತು ಸಾಲದ ಅರ್ಜಿಯ ಮೇಲಿರುವ ಸಹಿ ಒಂದೇ ಇದೆ. ಆರೋಪಿಗೆ ಸಂಬಂಧಪಟ್ಟಂತಹ ಉಳಿತಾಯ ಖಾತೆಯ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಿ.ಪಿ.1 ನ್ನು ನನ್ನ ಸಮಕ್ಷಮದಲ್ಲಿ ಬರೆದಿಲ್ಲ. ಸಾಕ್ಷಿ ಮುಂದುವರಿದ ಶಾಖಾ ಸಿಬ್ಬಂದಿಗೆ ಕೊಟ್ಟು ಹೋಗಿದ್ದಾರೆ ಎಂದು ಹೇಳುತ್ತಾರೆ. ಶಾಖಾ ಸಿಬ್ಬಂದಿಯ ಹೆಸರು ಹೇಮಾ ನಾಯ್ಕ. ಚೆಕ್ ಮೇಲೆ ಯಾರು ಸಹಿ ಹಾಕಿದ್ದಾರೆ ಎಂದು ಹೇಮಾ ನಾಯ್ಕ ಇವರನ್ನು ಬಿಟ್ಟು ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಪರಿಶೀಲನೆ ಮಾಡಿದ್ದೇನೆ ಎಂದು ಹೇಳುತ್ತಾರೆ. ಆರೋಪಿಯ ಸಹಿಯನ್ನು ಪರಿಶೀಲನೆ ಮಾಡಿ ಹೇಳುತ್ತಿದ್ದೇನೆ. ಆರೋಪಿಯ ಉಳಿತಾಯ ಖಾತೆಯಲ್ಲಿ ಇರುವ ಸಹಿಯನ್ನು ನೋಡಿದ್ದೇನೆ. ನಿ.ಪಿ.1 ರ ಮೇಲಿರುವ ಸಹಿ ಮತ್ತು ಉಳಿತಾಯ ಖಾತೆಯ ಮೇಲಿರುವ ಸಹಿ ಒಂದೇ ಇದೆ. ನಿ.ಪಿ.1 ರಿಂದ ನಿ.ಪಿ.11 ರ ಮೇಲಿರುವ ಸಹಿ ಮತ್ತು ಉಳಿತಾಯ ಖಾತೆಯ ಮೇಲಿರುವ ಸಹಿ ಒಂದೇ ಇದೆ. ನಿ.ಪಿ.1 ರಲ್ಲಿರುವ ಸಹಿ ಮತ್ತು ನಿ.ಪಿ.4 ರಲ್ಲಿರುವ ಸಹಿಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿ ಸ್ವಲ್ಪ ವ್ಯತ್ಯಾಸ ಇದೆ ಎಂದು ಹೇಳುತ್ತಾರೆ. ನಿ.ಪಿ.4 ರಲ್ಲಿ 'ಎಸ್ ' ಎನ್ನುವ ಅಕ್ಷರ ಎದ್ದು ಕಾಣುತ್ತಿದ್ದು ನಿ.ಪಿ.1 ರಲ್ಲಿ 'ಎಸ್ ' ಎನ್ನುವ ಅಕ್ಷರ ಎದ್ದು

ಕಾಣುವುದಿಲ್ಲ ಎಂದರೆ ಸರಿ. ನಿ.ಪಿ.1 ರಲ್ಲಿ ಓವರ ರೈಟಿಂಗ್ ಇದ್ದು ಅದರಲ್ಲಿ 'ಎಐಕೆಹೆಚ್ ' ಎಂದು ಬರೆದಿದ್ದು ನಿ.ಪಿ.4 ರಿಂದ ನಿ.ಪಿ.11 ರಲ್ಲಿ 'ಎಸ್ ಹೆಚ್ ಬಿ ಆರ್ ' ಎಂದು ಬರೆದಿದ್ದು ಕಾಣುತ್ತದೆ ಎಂದರೆ ಸರಿ. ನಿ.ಪಿ. 4 ರಿಂದ ನಿ.ಪಿ.11 ರಲ್ಲಿ ಆರೋಪಿ ಸಹಿ ಹಾಕದೇ ನಾವೇ ಸಹಿಯನ್ನು ಸೃಷ್ಠಿ ಮಾಡಿದ್ದೇವೆ ಅನ್ನುವುದು ಸರಿಯಲ್ಲ. ನಿ.ಪಿ.1, ನಿ.ಪಿ.4 ರಿಂದ ನಿ.ಪಿ.11 ರ ಮೇಲಿರುವ ಸಹಿಗಳನ್ನು ಹೇಮಾ ನಾಯ್ಕ ಇವರಿಗೆ ಬಿಟ್ಟು ಬೇರೆಯವರಿಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಯಾವುದೇ ಚೆಕ್ಕನ್ನು ಕೊಟ್ಟಾಗ್ಗ ತೆಗೆದುಕೊಂಡಹ ವ್ಯಕ್ತಿಯ ಹೆಸರನ್ನು ಸರಿಯಾಗಿ ಬರೆಯಬೇಕಾಗುತ್ತದೆ ಎಂದರೆ ಸರಿ. ಬೇರೆ ಬೇರೆ ಶಾಖೆಗಳಲ್ಲಿ ಚೆಕ್ಕನ್ನು ಕೊಡುವಾಗ ಶಾಖೆಯ ಹೆಸರನ್ನು ಬರೆಯಬೇಕಾಗುತ್ತದೆ ಎಂದರೆ ಸರಿ. ನಿ.ಪಿ.1 ರಲ್ಲಿ ಯಾವ ಶಾಖೆ ಎಂದು ಕೈಬರಹದಲ್ಲಿ ಬರೆದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹಣವನ್ನು ತುಂಬ ಬೇಕಾದರೆ ಖಾತೆಯ ವಿವರಣೆ ಬರೆಯಬೇಕಾಗುತ್ತದೆ ಎಂದರೆ ಸರಿ. ಆರೋಪಿಯ ಸಾಲದ ಖಾತೆಗೆ ಹಣ ಜಮಾ ಮಾಡಿರುವ ಬಗ್ಗೆ ರೇವಣಿ ಸ್ಲಿಪ್ ಅನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಆರೋಪಿಯ ವಿರುದ್ಧ ಆರ್ಬಿಟ್ರೇಶನ್ ನಡುವಳಿಗಳನ್ನು ಪ್ರಾರಂಭಿಸಿದ್ದೇವೆ ಎಂದರೆ ಸರಿ. ಸದರಿ ನಡುವಳಿಯನ್ನು 2024 ರಲ್ಲಿ ಪ್ರಾರಂಭಿಸಿದ್ದೇವೆ. ಯಾವ ತಿಂಗಳಿನಲ್ಲಿ ಪ್ರಾರಂಭಿಸಿದ್ದೇವೆ ಎಂದು ಹೇಳಲು ಬರುವುದಿಲ್ಲ. ಸದರಿ ಕೇಸಿನಲ್ಲಿ ಆರೋಪಿ ಹಾಜರಾಗಿಲ್ಲ. ಅಮಲ್ಜಾರಿ ಕೇಸನ್ನು ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ದಾಖಲಿಸಿದ್ದೇವೆ ಎಂದರೆ ಸರಿ. ಅಮಲ್ಜಾರಿ ಸಂಖ್ಯೆ 125/2025 ಎಂದರೆ ಸರಿ. ಆರೋಪಿಗೆ ಬಂದಂತಹ ನೋಟಿಸ್‌ನ ಪ್ರತಿಯೊಂದಿಗೆ ಅಮಲ್ಜಾರಿ ಅರ್ಜಿಯನ್ನು ಸಾಕ್ಷಿಗೆ ತೋರಿಸಿದ್ದು ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು ನಿ.ಡಿ.1 ಎಂದು ಗುರುತಿಸಲಾಯಿತು. ಈ ಕೇಸಿನಲ್ಲಿ ಆರೋಪಿಯಿಂದ ರೂ. 3,08,000-00 ಅಸಲು ಹಣ ಬರಬೇಕಿದೆ. ರೂ. 3,08,000-00 ಹಣ ಬರಬೇಕು ಎಂದು ಅಮಲ್ಜಾರಿ ಕೇಸನ್ನು ಹಾಕಿದ್ದೇವೆ ಎಂದರೆ ಸರಿ. ಆರೋಪಿ ರೂ. 3,08,000-00 ಹಣ ಕೊಡಬೇಕು ಎಂದು ತೋರಿಸುವ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಖಾಸಗಿ

ಫಿರ್ಯಾದಿಯಲ್ಲಿ ರೂ. 3,53,000-00 ಕೊಡಬೇಕು ಎಂದು ಸಲ್ಲಿಸಿದ್ದೇವೆ ಎಂದರೆ ಸರಿ. ರೂ. 2,43,000-00 ಹಣ ಕೊಡಬೇಕು ಎಂದು ಆದೇಶ ಆಗಿದ್ದನ್ನು ನಿ.ಡಿ.1 ರಲ್ಲಿ ತೋರಿಸಿದ್ದೇವೆ ಎಂದರೆ ಸರಿ. ರೂ. 3,53,000-00 ಆರೋಪಿ ಕೊಡಬೇಕು ಎಂದು ತೋರಿಸುವ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಆರೋಪಿ ಕಡೆಯಿಂದ ಪಿಗ್ಮಿ ಹಣ, 2 ಎಲ್.ಐ.ಸಿ. ಪಾಲಿಸಿಗಳನ್ನು ಮತ್ತು 2 ಎಫ್.ಡಿ. ಹಣವನ್ನು ಇಟ್ಟುಕೊಂಡಿದ್ದೇವೆ ಎಂದರೆ ಸರಿ. ಒಂದೊಂದು ಪಾಲಿಸಿಯ ಮೆಚುರಿಟಿ ಹಣ ರೂ. 60,000-00 ಆಗುತ್ತದೆ ಎಂದರೆ ಸರಿ. ಸದರಿ ಹಣವನ್ನು ನಮ್ಮ ಖಾತೆಗೆ ಹಾಕಿಕೊಂಡಿದ್ದೇವೆ ಎಂದರೆ ಸರಿ. ಠೇವಣಿ ಹಣ ಸಹ ನಮ್ಮ ಖಾತೆಗೆ ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಪಿಗ್ಮಿ ಹಣ ಸಹ ನಮ್ಮ ಖಾತೆಗೆ ಹಾಕಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಹಣವನ್ನು ನಾವು ತುಂಬಿಕೊಂಡಿರುವುದರಿಂದ ಆರೋಪಿ ಯಾವುದೇ ಹಣ ತುಂಬುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಕೊಟ್ಟಂತಹ ಖಾಲಿ ಚೆಕ್ಕನ್ನು ಸಹಿ ಹಾಕದೇ ಕೊಟ್ಟಿದ್ದು ಅದನ್ನು ನಾವೇ ಭರ್ತಿ ಮಾಡಿಕೊಂಡು ಈ ಕೇಸನ್ನು ದಾಖಲಿಸಿದ್ದೇವೆ ಅನ್ನುವುದು ಸರಿಯಲ್ಲ. ಆರೋಪಿ ಎಲ್ಲಾ ಹಣವನ್ನು ತುಂಬಿದ ನಂತರ ಚೆಕ್ ಮರಳಿ ಕೊಡಲು ಕೇಳಿದಾಗ ನಾವು ಚೆಕ್ಕ ಕಳೆದು ಹೋಗಿದೆ ಎಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ಆನಂತರ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಿ ಈ ಕೇಸನ್ನು ಹಾಕಿದ್ದೇವೆ ಅನ್ನುವುದು ಸರಿಯಲ್ಲ. ಕಾನೂನಾತ್ಮಕವಾಗಿ ಬರಬೇಕಾದ ಯಾವುದೇ ಹಣ ಆರೋಪಿಯಿಂದ ಬರಬೇಕಾಗಿಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾದಂ. ಕಾರವಾರ